ಇಲ್ಲದೆ ಕೊಡುತ್ತಾ ಇಲ್ಲ. ಆ ದೃಷ್ಟಿಯಿಂದ ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಎಷ್ಟು ಡಿಸ್‌ಕನೆಕ್ಟ್ ಆಗಿದೆ ಅದಕ್ಕೆ ಇನ್‌ಸ್ಟಾಲ್‌ಮೆಂಟ್ ವಸೂಲ್ ಮಾಡುವುದಕ್ಕೆ ಸ್ಪೆಕ್ಟಾಗಿ ಆರ್ಡರ್ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ.—ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ ಡಿಸ್‌ಕನೆಕ್ಟ್ ಆಗಬಾರದು. ಅವರೆಲ್ಲರಿಗೂ ಕನೆಕ್ಷನ್ ಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶವಿದೆ. ಆರ್ಡರ್ ಕಳಿಸಿದ್ದೇವೆ. ಆದರೆ ಯಾರೂ ಬರುತ್ತಾ ಇಲ್ಲ. ರೇಡಿಯೋನಲ್ಲಿ, ಪೇಪರಿನಲ್ಲಿ ಅನೌನ್ಸ್ ಮಾಡಿದೆವು. ಯಾರು ಮುಂದೆ ಬಂದೇ ಇಲ್ಲ. ಆದ್ದರಿಂದ ತಾವೆಲ್ಲರೂ ರೈತರಿಗೆ ಹೇಳಿದರೆ ಒಳ್ಳೆಯದು.

Sanction of Rural Water Scheme in Hadagalli Constituency.

534. SRI N. KARIBASAVANA GOWDA (Hadagalli).—Will the Minister for Rural Development and Panchayat Raj be pleased to state:—

(a) the number of Rural Water Schemes before the Government for sanction in respect of Chigateri Hobli of Hadagalli Constituency who have paid 10% Local Contribution;

(b) the number of Schemes proposed under full Government grant scheme in this Hobli;

(c) what steps the Government proposes to take up the schemes under 10% Local Contribution, whether paid fully or partially?

SRI B. RAMAIAH (Minister for Rural Development and Panchayat Raj).—

(a) There are no Rural Water Supply Schemes before the Government for sanction in respect of Chigateri Hobli of Hodagalli Constituency who have paid 10% of Local Contribution.

(b) The Chief Engineer, PHE has proposed a Rural Water Supply Schemes for Kumarahalli Tanda in Chigateri Hobli for the year 1982-83 and the said proposal has been sent to Deputy Commissioner concerned by the Chief Engineer for obtaining approval of the District Development Council.

(c) All sanctioned schemes are being taken up by Govt fully with Govt. funds without insisting on 10% contribution from the Village Panchayats as per decision of Govt. *vide* G.O. No. RDC 1120 VRW 79, dated 10-10-1979. However, other things being similar whenever 10% Contribution has already been paid such villages are being given priority over other villages while sanctioning N.R.W. Schemes.

ಶ್ರೀ ಎನ್. ಕರಿಬಸವನಗೌಡ.—ಅಧ್ಯಕ್ಷರೇ ೧೯೭೫-೭೬ ರಲ್ಲಿಯೇ ಮತ್ತಿಹಳ್ಳಿ ಮತ್ತು ಸಾಸಿವೆ ಹಳ್ಳದವರು ಹಣವನ್ನು ಸರ್ಕಾರಕ್ಕೆ ಕಟ್ಟಿದ್ದಾರೆ, ಆದರೆ ಇದುವರೆಗೂ ಯಾವುದೇ ಕಾರ್ಯಕ್ರಮವನ್ನು ಕೈಗೊಂಡಿಲ್ಲ, ಸರ್ಕಾರ ಇದರ ಬಗ್ಗೆ ಏನಂ ಹೇಳುತ್ತದೆಂದು ಕೇಳುತ್ತೇನೆ.

ಶ್ರೀ ಬಿ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ವಿವರವಾಗಿ ಹೇಳಿದ್ದೇನೆ. ಮಾನ್ಯ ಸದಸ್ಯರು ಈಗ ಏನು ಮತ್ತಿಹಳ್ಳಿ ಮತ್ತು ಸಾಸಿವೆ ಹಳ್ಳಕ್ಕೆ ದುಡ್ಡು ಕಟ್ಟಿದ್ದಾರೆಂದು ಹೇಳುತ್ತಿದ್ದಾರೆ.

ಆದರೆ ಮತ್ತಿಹಳ್ಳಕ್ಕೆ ೩೨ ಸಾವಿರ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾಗ ರೂ ೩,೨೦೦ ಮಾತ್ರ ಕಟ್ಟಿದ್ದಾರೆ. ಸಾಸಿವೆ ಹಳ್ಳಕ್ಕೆ ೩೨ ಸಾವಿರ ಎಸ್ಟಿಮೇಟ್ ಮಾಡಿದಾಗ ಅವರು ರೂ ೨,೭೦೦ ಮಾತ್ರ ಕಟ್ಟಿದ್ದಾರೆ. ಆದರೆ ಸರ್ಕಾರದ ಆದೇಶವೇನಿದೆ ಎಂದರೆ ೧೦ ಪರ್ಸೆಂಟ್ ಆದರೂ ಸಂಪೂರ್ಣವಾಗಿ ಯಾರು ಕಟ್ಟಿದ್ದಾರೆ ಅವರಿಗೆ ಅದ್ಯತೆ ಮೇಲೆ ಕೊಡಬೇಕೆಂದು ಮಾಡಿದ್ದೇವೆ. ಅವರು ಭಾಗಶ: ಕಟ್ಟಿರತಕ್ಕದ್ದನ್ನು ಗಮನದಲ್ಲಿಟ್ಟುಕೊಂಡು ಮುಂದೆ ನಾವು ೧೯೮೨–೮೩ರ ಹೊತ್ತಿಗೆ ತೆಗೆದುಕೊಳ್ಳತಕ್ಕ ಸಂಧರ್ಭದಲ್ಲಿ ಪರಿಶೀಲನೆ ಮಾಡುತ್ತೇವೆ ಡಿ.ಡಿ.ಸಿ. ಯವರಿಂದ ರೆಕ್‌ಮೆಂಡೇಷನ್ ಆಗಿ ಬರಬೇಕು ಆ ರೀತಿ ಬಂದಂಥವುಗಳಿಗೆ ನಾವು ಮೊದಲು ಆದ್ಯತೆ ಕೊಟ್ಟು ಮಾಡುತ್ತಿದ್ದೇವೆ. ಆದರೆ ಇದರ ಬಗ್ಗೆ ಬಂದಿಲ್ಲ, ಆದರೂ ಸಹ ಭಾಗಶಃ ಕಟ್ಟಿರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ೧೯೮೨–೮೩ ನೇ ಸಾಲಿಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಕರಿಬಸವನಗೌಡ.—ಕುಮಾರ ಹಳ್ಳ ತಾಂಡದ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ ಅದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ಆದರೆ ೧೯೭೫–೭೬ರಲ್ಲಿಯೇ ಮತ್ತಿಹಳ್ಳಿ ಮತ್ತು ಸಾಸಿವೆ ಹಳ್ಳಿ ಯವರು ದುಡ್ಡು ಕಟ್ಟಿದ್ದರೂ ಸಹ ಇಷ್ಟು ಆಲಸ್ಯ ಏತಕ್ಕೆ ಮಾಡುತ್ತಿದ್ದೀರಿ. ಹಿಂದೆ ಅಧಿಕಾರಿಗಳು ಪಂಚಾಯಿತಿಯವರನ್ನು ಕೇಳಿದಾಗ, ಅಲ್ಲಿಯ ಪಂಚಾಯಿತಿಯವರು ನಮಗೆ ಡೈರೆಕ್ಟ್ ಪಂಪಿಂಗ್ ಸೆಟ್ ಬೇಡ, ಓವರ್ ಹೆಡ್ ಟ್ಯಾಂಕ್‌ಗಳನ್ನು ಕೊಡಿ ಎಂದು ಕೇಳಿದ್ದರು, ಅದರ ಬಗ್ಗೆ ಅಧಿಕಾರಿಗಳು ಆದೇಶ ನೀಡುತ್ತೇವೆಂದು ಹೇಳಿದ್ದರು, ಆದರೆ ಅಲ್ಲಿಂದ ಇಲ್ಲಿಯವರೆಗೆ ನಿಮ್ಮ ಅಧಿಕಾರಿಗಳು ಏನು ಮಾಡಿದರು? ಇದರ ಬಗ್ಗೆ ತಾವು ಸೂಕ್ತವಾದ ವಿವರವನ್ನು ನೀಡಬೇಕು.

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೇ, ಈ ಪ್ರಶ್ನೆಗೆ ನಾನು ಹಿಂದೆ ಸಹ ಉತ್ತರ ಹೇಳಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚಿತವಾಗಿ ೧ ವರ್ಷದಲ್ಲಿ ೧೭೫–೨೦೦ ಯೋಜನೆಗಳನ್ನು ಮಾಡಿದ್ದರು. ಆದರೆ ನಮ್ಮ ಮಾನ್ಯಮುಖ್ಯಮಂತ್ರಿಗಳವರು ಬೆಳಗಾಂನಲ್ಲಿ ನಡೆದಂಥ ಸಚಿವ ಸಂಪುಟದ ಸಭೆಯಲ್ಲಿ ೮೦೦ ಯೋಜನೆಗಳನ್ನು ಕೇವಲ ಒಂದೇ ದಿವಸದಲ್ಲಿ ಬಿಡುಗಡೆ ಮಾಡಿದ್ದಾರೆ. ಆನಂತರ ಸುಮಾರು ೨೦೦ ಯೋಜನೆಗಳನ್ನು ಬಿಡುಗಡೆ ಮಾಡಿದ್ದೇವೆ. ಒಟ್ಟು ೧,೦೦೦ ಯೋಜನೆ ಗಳನ್ನು ನಾವು ೧೯೮೧–೮೨ರಲ್ಲಿ ಈ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯಲ್ಲಿ ಕೊಟ್ಟು ಒಂದು ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ. ಆದುದರಿಂದ ಅವುಗಳನ್ನು ಉದ್ದೇಶಪೂರ್ವಕ ವಾಗಿ ಕೈ ಬಿಟ್ಟಿಲ್ಲ, ತಾಂತ್ರಿಕವಾಗಿ ಕೆಲವು ತೊಂದರೆಗಳು ಇತ್ತು, ಮತ್ತೆ ಶೇಕಡ ೧೦ರಂತೆ ನಮ್ಮ ರಾಜ್ಯ ದಲ್ಲಿರತಕ್ಕ ೧೭೫ ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಿಂದ ಹಣ ಪಾವತಿ ಮಾಡಿದ್ದಾರೆ, ಆದುದರಿಂದ ಅದ್ಯತೆ ಮೇಲೆ ಮಾಡಿಕೊಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಈಗಾಗಲೇ ಹೇಳಿದ್ದೇನೆ.

ಶ್ರೀ ಎನ್. ಕರಿಬಸವನ ಗೌಡ.—ಬಹಳ ಸಂತೋಷ, ೧,೦೦೦ ಯೋಜನೆಗಳನ್ನು ಈಗಾಗಲೇ ನಮ್ಮ ರಾಜ್ಯದಲ್ಲಿ ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದೀರಿ ಅದಕ್ಕಾಗಿ ಸ್ವಾಗತ ಮಾಡುತ್ತೇನೆ. ಆದರೆ ನನ್ನ ಕ್ಷೇತ್ರದಲ್ಲಿ ಏತಕ್ಕೆ ಹೆಚ್ಚಿಗೆ ಬಿಡುಗಡೆ ಮಾಡಿಲ್ಲ? ನಮ್ಮಲ್ಲಿಯೇ ಲೋಪ ದೊಷಗಳಿರಬಹುದು, ಕೊನೆಯ ಪಕ್ಷ ೧೯೮೨–೮೩ರಲ್ಲಿ ಮಾಡಿಸಿ ಕೊಡುತ್ತೇನೆ ಎನ್ನುವ ಆಶ್ವಾಸನೆ ಕೊಡುತ್ತೀರಾ?

ಶ್ರೀ ಬಿ. ರಾಮಯ್ಯ.—೧೯೮೨-೮೩ರಲ್ಲಿ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ತೀವ್ರವಾಗಿ ಪರಿಶೀಲನೆ ಮಾಡುವುದಕ್ಕೆ ಮನಸ್ಸಿನಲ್ಲಿಟ್ಟುಕೊಂಡು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sanction of H.B.A. and other Advances to I.A.S. Officers.

661 SRI G. RAJU GOWDA (Hanur).—Will the Chief Minister be pleased to state:—

(*a*) the number of I.A.S. Officers in the State;

(*b*) the amount disbursed to these Officers per month in the form of salary;

(*c*) the amount of advance sanctioned to the I.A.S. Officers towards House Building Advance and Motor Car Advance during 1980-81; the number of Officers benefitted?